## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 27-10-2022

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 181/2022 ಕಲಂ 392, 170, 419 ಐಪಿಸಿ :-

ದಿನಾಂಕ 26/10/2022 ರಂದು 1700 ಗಂಟೆಗೆ ಫಿರ್ಯಾದಿ ಶ್ರೀ ಬಸವರಾಜ ತಂದೆ ಕಲ್ಲಪ್ಪಾ ಹಡಪದ ವಯ:63 ವರ್ಷ ಜಾತಿ: ಹಡಪದ ಉ:ಕುಲಕಸಬು ಸಾಃನಿರ್ಣಾವಾಡಿ ತಾ:ಚಿಟಗುಪ್ಪಾ ನಿವಾಸಿ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ದಿನಾಂಕ 25/10/2022 ರಂದು ಮುಂಜಾನೆ 10:00 ಗಂಟೆಗೆ ನಿರ್ಣಾವಾಡಿ ಗ್ರಾಮದಿಂದ ಬೀದರಕ್ಕೆ ಬಂದು ಸರಕಾರಿ ಆಸ್ಪತ್ರೆಗೆ ಗುಳಿಗೆಗಳು ತೆಗೆದುಕೊಂಡು ಹೋಗೋಣ ಅಂತಾ ಸರಕಾರಿ ಆಸ್ಪತ್ರೆಗೆ ಹೋಗಿ ಅಲ್ಲಿ ವಿಚಾರಿಸಲಾಗಿ ಗುಳಿಗೆಗಳು ಇಲ್ಲದ ಕಾರಣ ಅಲ್ಲಿಂದ ಮಲ್ಲಿಕಾರ್ಜುನ ಜಿ.ಬಿ ಆಸ್ಪತ್ರೆಗೆ ನಡೆದುಕೊಂಡು ಹೋಗುವಾಗ ಮದ್ಯಾಹ್ನ 1330 ಗಂಟೆಯ ಸಮಯಕ್ಕೆ ಮಡಿವಾಳ ವೃತ್ತದ ಹತ್ತೀರ ಹಿಂದಿನಿAದ ಅಂದರೆ ಕನ್ನಡಾಂಬೆ ವೃತ್ತದ ಕಡೆಯಿಂದ ಇಬ್ಬರು ವ್ಯಕ್ತಿಗಳು ಕಪ್ಪು ಬಣ್ಣದ ಮೊಟರ ಸೈಕಲ ನೇದರ ಮೇಲೆ ಬಂದು ಫಿರ್ಯಾದಿ ಹತ್ತೀರ ನಿಲ್ಲಿಸಿ ಮೋಟರ ಸೈಕಲ ಚಾಲಕನ್ನು ನನಗೆ "ನಾನು ನಿನಗೆ ಎಷ್ಟು ಸಲ ಕರಿಯಬೇಕು ನಿನಗೆ ಕೇಳುತಿಲ್ಲ ಎಂದು ತಿಳಿಸಿದಾಗ ಫಿರ್ಯಾದಿಯು ನಿಂತಾಗ ಅವರಲ್ಲಿಯ ಒಬ್ಬನು ನಾನು ಸಿಐಡಿ ಇನ್ಸಪೇಕ್ಟರ ಇದ್ದೇನೆ ನಿನ್ನ ಹತ್ತೀರ ಗಾಂಜಾ ಇರುತ್ತದೆ" ಅಂತಾ ಹೇಳಿ, ಫಿರ್ಯಾದಿ ಜೇಬಿನಲ್ಲಿ ಕೈ ಹಾಕಿ ಇವರ ಹತ್ತಿರ ಇದ್ದ 3000/- ರೂ ಗಳು ಮುಂದೆ ಕುಳಿತಿದ್ದ ವ್ಯಕ್ತಿ ಜೇಬಿನಿಂದ ದೋಚಿಕೊಂಡು, ಇಬ್ಬರೂ ವ್ಯಕ್ತಿಗಳು ಮೊಟರ ಸೈಕಲ ತೆಗೆದುಕೊಂಡು ಜೋರಾಗಿ ಓಡಿಸಿಕೊಂಡು ಕನ್ನಡಾಂಬೆ ವೃತದ ಕಡೆಗೆ ಹೋಗಿದ್ದು ಇರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.